

# ಇಮ್ರಾನ್‌ರ ರುಚಿ ಮೀಮಾಂಸೆ

ಉಪ್ಪು, ಹುಳಿ ಮತ್ತು ಖಾರಕ್ಕೆ ಊಟದಲ್ಲಿ ವಿಪರೀತ ಮಹತ್ವವಿದೆ. ಮೂರೂ ಹದವಾಗಿದ್ದರೆ ಊಟ ರುಚಿಕರ. ಈ ರುಚಿ ಮೀಮಾಂಸೆಯನ್ನು ನಿರ್ದೇಶಕ ಇಮ್ರಾನ್ ಸರ್ದಾರಿಯಾ ಚಿತ್ರರಂಗಕ್ಕೆ ತಂದಿದ್ದಾರೆ. ತೆರೆಗೆ ಸಿದ್ಧವಾಗುತ್ತಿರುವ ಅವರ ಚಿತ್ರದ ಶೀರ್ಷಿಕೆ ‘ಉಪ್ಪು ಹುಳಿ ಖಾರ’.

ಇಮ್ರಾನ್ ನೃತ್ಯ ನಿರ್ದೇಶಕರಾಗಿ ಪ್ರಸಿದ್ಧರಾದವರು. ನಿರ್ದೇಶಕರಾಗಿ ಗುರ್ತಿಸಿಕೊಳ್ಳುವ ಪ್ರಯತ್ನದಲ್ಲಿರುವ ಅವರಿಗೆ ‘ಉಪ್ಪು ಹುಳಿ ಖಾರ’ ಮಹತ್ವಾಕಾಂಕ್ಷೆಯ ಸಿನಿಮಾ ಎನ್ನಿಸಿದೆ. ಈ ಸಿನಿಮಾ ತನ್ನ ತಾರಾಗಣ ಹಾಗೂ ತಂತ್ರಜ್ಞರಿಂದ ಗಾಂಧಿನಗರದಲ್ಲಿ ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಶಶಿ, ಧನಂಜಯ್ ಹಾಗೂ ಶರತ್ ಎನ್ನುವ ಮೂವರು ಹುಡುಗರು ಮೂರು ರುಚಿಗಳನ್ನು ಚಿತ್ರದಲ್ಲಿ ಪಾತ್ರಗಳ ರೂಪದಲ್ಲಿ ಪೋಷಿಸಿದ್ದಾರೆ. ಇವರಿಗೆ ಇನ್ನೊಂದು ತುದಿಯಲ್ಲಿ ಮಾಲಾಶ್ರೀ, ಅನುಶ್ರೀ ಹಾಗೂ ಜಯಶ್ರೀ ನಟಿಸಿದ್ದಾರೆ.

ಮಾಲಾಶ್ರೀ ಹಾಗೂ ಅನುಶ್ರೀ ಚಿತ್ರರಂಗಕ್ಕೆ ಹೊಸಬರೇನಲ್ಲ. ಆದರೆ, ಜಯಶ್ರೀ ಅವರಿಗೆ ಸಿನಿಮಾ ಹೊಸತು. ಆಡಿಷನ್‌ನಲ್ಲಿ ಅಷ್ಟೇನೂ ಚೆನ್ನಾಗಿ ಮಾಡದಿದ್ದರೂ, ಅವಕಾಶ ಕೊಟ್ಟ ನಿರ್ದೇಶಕರ ಬಗ್ಗೆ ಅವರಿಗೆ ಕೃತಜ್ಞತಾ ಭಾವವಿದೆ. ಉಳಿದಂತೆ, ಮಾಲಾಶ್ರೀ ಅವರದು ಚಿತ್ರದಲ್ಲಿ ವಿಶೇಷ ಪಾತ್ರ. ಸಿನಿಮಾದ ಆರಂಭದಲ್ಲೇ ಇಮ್ರಾನ್ ಹಾಗೂ ಮಾಲಾಶ್ರೀ ನಡುವೆ ಗೊಂದಲ–ಮನಸ್ತಾಪ ಉಂಟಾಗಿತ್ತಾದರೂ, ನಂತರದಲ್ಲಿ ಇಬ್ಬರ ನಡುವೆ ಸ್ನೇಹ ಬೆಳೆದಿದೆ. ನಿರ್ದೇಶಕರ ಸಿನಿಮಾ ಬದ್ಧತೆ ಮಾಲಾಶ್ರೀ ಅವರಿಗೆ ಇಷ್ಟವಾಗಿದೆ.

ನಿರ್ದೇಶಕರ ‘ತ್ರಿವಳಿ ಸೂತ್ರ’ ತಾರಾಗಣಕ್ಕೆ ಮಾತ್ರ ಸೀಮಿತವಾಗಿಲ್ಲ. ಜೂಡಾ ಸ್ಯಾಂಡಿ, ಕಿಶೋರ್ ಹಾಗೂ ಪ್ರಜ್ವಲ್ ಪೈ ಎನ್ನುವ ಮೂವರು ಸಂಗೀತ ನಿರ್ದೇಶಕರು ಗೀತೆಗಳನ್ನು ಸಂಯೋಜಿಸಿದ್ದಾರೆ. ಹಿನ್ನೆಲೆ ಗಾಯಕರ ಪಟ್ಟಿಯಲ್ಲಿ ಕೂಡ ಮೂರು ಪ್ರಮುಖ ಹೆಸರುಗಳಿವೆ. ಇಮ್ರಾನ್ ಮೇಲಿನ ಪ್ರೀತಿಯಿಂದ ಪುನೀತ್ ರಾಜಕುಮಾರ್, ಸುದೀಪ್ ಹಾಗೂ ಸಾಧು ಕೋಕಿಲ ಚಿತ್ರದಲ್ಲಿ ಹಾಡಿದ್ದಾರೆ. ಪುನೀತ್ ಹಾಡಿರುವ ಗೀತೆಯನ್ನು ಅಮೆರಿಕದಲ್ಲಿ ಚಿತ್ರಿಸಲಾಗಿದೆ. ತಾರಾನಟರು ಧ್ವನಿ ನೀಡಿರುವ ಗೀತೆಗಳು ಸಿನಿಮಾದ ಹೈಲೈಟ್‌ಗಳಾಗಿವೆ ಎನ್ನುವ ವಿಶ್ವಾಸ ನಿರ್ದೇಶಕರದು.

ನಟಿ ರಾಗಿಣಿ ‘ಉಪ್ಪು ಹುಳಿ ಖಾರ’ದ ಮತ್ತೊಂದು ವಿಶೇಷ. ಅವರು ಈ ಚಿತ್ರದಲ್ಲಿ ತುಪ್ಪವನ್ನೇನೂ ಮಾರುತ್ತಿಲ್ಲ. ಬದಲಾಗಿ, ನಾಗಿಣಿ ಅವತಾರದಲ್ಲಿ ವಿಶೇಷ ಗೀತೆಯೊಂದಕ್ಕೆ ಜೀವ ತುಂಬಿದ್ದಾರಂತೆ.




ನಿರಂಜನ್ ಬಾಬು ಚಿತ್ರದ ಛಾಯಾಗ್ರಾಹಕರು. ಇಡೀ ಚಿತ್ರವನ್ನು ಒಂದು ದೃಶ್ಯಕಾವ್ಯದ ರೀತಿ ಅವರು ಚಿತ್ರೀಕರಿಸಿದ್ದಾರಂತೆ. ಕಳೆದ ವಾರ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಚಿತ್ರವನ್ನು ತೆರೆ ಕಾಣಿಸುವ ಪ್ರಯತ್ನದಲ್ಲಿ ಚಿತ್ರತಂಡ ತೊಡಗಿಕೊಂಡಿದೆ.

■ ರಘು